
*ಬಿಂಡಿಗನವಲೆ ರಂಗರಾಜು, ಬೆಂಗಳೂರು*

*ಹೆಣ್ಣೊಬ್ಬಳು ಕ್ಷೌರದಂಗಡಿ ಪ್ರಾರಂಭಿಸಿ ಗಂಡಸರಿಗೆ ಮಾತ್ರ ಎಂದು ಫಲಕ ಹಾಕಿದರೆ?*




ಸುಮಾರು ಗಂಡಸರು ಚೆನ್ನಾಗಿ ಬೋಳಿಸಿಕೊಳ್ಳುತ್ತಾರೆ!

*ದೇಶವಳ್ಳಿ ಶಿವು, ಚಾಮರಾಜನಗರ*

*ಗೋವುಗಳ ಹಟ್ಟಿಗೆ ಕೊಟ್ಟಿಗೆ ಅನ್ನುತ್ತಾರೆ, ಗೋಮುಖವ್ಯಾಘ್ರಗಳ ಹಟ್ಟಿಗೆ...?*

ರೆಸಾರ್ಟ್!

*ಟಿಪ್ಪು ಸುಲ್ತಾನ್, ಬೀದರ್*

*ಇತ್ತೀಚೆಗೆ ಹುಲಿಗಳನ್ನು ಉಳಿಸಿ ಎಂಬುದರ ಬದಲು ಹೆಣ್ಣನ್ನು ಉಳಿಸಿ ಎಂಬ ಕೂಗು ಕೇಳಿಬರುತ್ತಿದೆಯಲ್ಲಾ...?*

ಎರಡೂ ಒಂದೇ, ನನ್ನ ಮನೆಯ ಹೆಣ್ಣುಗಳೆಲ್ಲಾ ಹುಲಿಗಳೇ ಎಂದನೊಬ್ಬ ಹೆನ್ ಪೆಕ್ಡ!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*

*ಅಲ್ರಪ್ಪಾ, ಹೊರಗಡೆ ಹೊರಟಾಗ ಕರಿಬೆಕ್ಕು ಅಡ್ಡ ಬಂದರೆ ಏನು ಮಾಡಬೇಕಪ್ಪಾ?*



ಆ ಬೆಕ್ಕಿಗೂ ಅದೇ ಚಿಂತೆಯಂತೆ ಹೊರಗಡೆ ಹೊರಟಾಗ ಆ ಕರಿಮುಸುಡಿ ಅಡ್ಡ ಬಂದ್ರೆ ಏನು ಮಾಡುವುದು? ಎಂದು!

*ಕಂಡಕ್ಟರ್ ರಾಜು, ಗುಬ್ಬಿ*

*ಮೊದಲ ಮುತ್ತಿಗೂ, ಮೊದಲ ಮಳೆಗೂ ವ್ಯತ್ಯಾಸವೇನು?*

ಮೊದಲ ಮುತ್ತು ನೆನೆಸಿಕೊಳ್ಳಲು ಹಿತ, ಮೊದಲ ಮಳೆ ನೆನೆಯಲು ಹಿತ!

*ಆರ್. ಮಧುಸೂದನ್, ಹಾಸನ*

*ಭಾರತದಲ್ಲಿ ಪ್ರೇಮಿಗಳಿಗೆ ರೇಡಿಯೋ ಕಾಲರ್ ಅಳವಡಿಸಿದರೆ ಏನಾಗಬಹುದು?*

ನೀವು ವೀಕ್ಷಿಸಲು ಪ್ರಯತ್ನಿಸುತ್ತಿರುವ ರೇಡಿಯೋ ಕಾಲರ್ ಹೊರವಲಯದಲ್ಲಿದೆ ಎಂಬ ರೆಕಾರ್ಡಿಂಗ್ ಮಾಮೂಲಾಗಬಹುದು!

*ಸೌಖ್ಯಾ ರಾಜಾರಾಮ ಹೆಗಡೆ, ಶಿರಸಿ*

*ಅತ್ಯಂತ ಉದ್ದವಾದ ಪ್ರಾಣಿ ಯಾವುದು?*

ವಕೀಲ, ಏಕೆಂದರೆ ಇದರಷ್ಟು ಉದ್ದ ವಾದ ಮಾಡುವುದು ಇನ್ನಾವುದಕ್ಕೂ ಸಾಧ್ಯವಿಲ್ಲ!

*ಪಿ.ಜೆ. ರಾಘವೇಂದ್ರ, ಮೈಸೂರು*

*ಪ್ರಾಣಿಸಂಗ್ರಹಾಲಯಕ್ಕೂ, ವಿಧಾನಸೌಧಕ್ಕೂ ಏನು ವ್ಯತ್ಯಾಸ?*

ಅಲ್ಲಿನ ಪ್ರಾಣಿಗಳು ಕೃಶವಾಗುತ್ತವೆ, ಇಲ್ಲಿನ ಪ್ರಾಣಿಗಳು ಕೊಬ್ಬುತ್ತವೆ.

*ವಿ. ಹಮೀದ್, ವಿಟ್ಲ*

*ಕಾಲೇಜು ಗರ್ಲ್ ಕ್ಲಾಸಿಗೆ ಕರೆಯುತ್ತಿದ್ದಾಳೆ, ಹೋಗಲೇ?*

ಓಹ್! ಯಾರೋ ಚುಡಾಯಿಸುತ್ತಿದ್ದು, ಬಾಡಿಗಾರ್ಡ್ ಬೇಕಾಗಿರಬಹುದು!

*ಎಸ್. ಶ್ರೀಧರ್, ಬೆಂಗಳೂರು*

*ಮದುವೆಗೆ ಮುಂಚೆ ಗಂಡು ಹೆಣ್ಣಿನ ಕೈ ಹಿಡಿದರೆ ಪ್ರೀತಿ, ಮದುವೆಯ ನಂತರ ಕೈ ಹಿಡಿದರೆ...?*

ಆತ್ಮರಕ್ಷಣೆ!

*ಕಾ. ಪ್ರಕಾಶ್, ಕನಕಪುರ*

*ಗುರುವಿನ ಗುಲಾಮನಾದರೆ ಮುಕ್ತಿ, ಮಡದಿಯ ಗುಲಾಮನಾದರೆ?*

ಬುತ್ತಿ!

*ಗಾಯತ್ರಿ, ರಾಜಾಜಿನಗರ*

*ಸಾರಾಯಿ ಕುಡಿದರೆ ಸತ್ಯ ಹೊರಬೀಳುತ್ತೆ ಎಂದು ಸಾರಾಯಿಯನ್ನೇ ಕುಡಿಯುತ್ತಿದ್ದರೆ?*

ಸತ್ಯವಾಗಿಯೂ ಹೊರಗೆ ಬೀಳಬೇಕಾಗುತ್ತದೆ!

*ಶ್ವೇತಾಲಕ್ಷ್ಮಿ ಅಮೈ, ಬೆಂಗಳೂರು*

*ಪ್ರಶ್ನೆಗಳನ್ನು ಓದಿ ಸಿಟ್ಟು ಬಂದರೆ ಏನು ಮಾಡುತ್ತೀರಿ?*

ಉತ್ತರಿಸಿಬಿಡುತ್ತೇನೆ!

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*

*ಮೊಸಳೆಯು ಹೊಟ್ಟೆತುಂಬ ತಿಂದು ನಂತರ ಕಣ್ಣೀರು ಸುರಿಸುವುದೇಕೆ?*

ಪಾಪ, ಅಜೀರ್ಣವೋ, ಅಸಿಡಿಟಿಯೋ ಆಗುವುದೋ ಏನೋ!

## ಬಹುಮಾನಿತ ಪ್ರಶ್ನೆ

*ಬಾಲುಸುತ, ಬೆಂಗಳೂರು*

*ದೇವರನ್ನು ಕಾಣಲು ಬೆಟ್ಟ ಹತ್ತುವವರು ಬಂಧುಗಳನ್ನು ಕಾಣಲು ಮೆಟ್ಟಿಲು ಹತ್ತುವುದಿಲ್ಲವಲ್ಲಾ...?*

ಎರಡಕ್ಕೂ ಭಯವೇ ಕಾರಣ. ಅಲ್ಲಿ ಹೋಗದಿದ್ದರೆ ಏನಾಗುವುದೋ ಎಂಬ ಭಯ, ಇಲ್ಲಿ ಹೋದರೆ ಏನಾಗುವುದೋ ಎಂಬ ಭಯ!

*ನಾರಾಯಣ, ಗುಗ್ಗರಹಟ್ಟಿ*

*ಒಂದು ವೇಳೆ ನಿದ್ದೆಯನ್ನು ಕೊಂಡುಕೊಳ್ಳುವ ಹಾಗಿದ್ದಿದ್ದರೆ?*

ಮಂತ್ರಿಗಳು ಹೋಲ್‌ಸೇಲ್ ಮಾರಾಟ ಕೇಂದ್ರಗಳಾಗುತ್ತಿದ್ದರು.


*ಎಂ.ಬಿ. ಖೋದಾನಪುರ, ಸವದತ್ತಿ*

*ರಂಭೆ, ಊರ್ವಶಿ, ಮೇನಕೆಯರು ಬಂದರೆ ಯಾರಾದರೂ ಮದುವೆಯಾಗುವರೇ?*

ಓಲ್ಡ್ ಮಾಡಲ್‌ಗಳಲ್ಲವೇ, ನಮ್ಮಜ್ಜನನ್ನು ಕೇಳಿ ಹೇಳುತ್ತೇನೆ!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*

*ಹಣೆಬರಹ ತಿದ್ದುವ ಹಾಗಿದ್ದರೆ?*



ಬರೀ ತಿದ್ದುಪಡಿಗಳೇ ತುಂಬಿ ಹಣೆ ಸಂವಿಧಾನವಾಗುತ್ತದೆ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*

*ಭಕ್ತಿಗೆ ಮಾನದಂಡವಿಲ್ಲವೇ?*

ಅದೂ ಒಂದು ವಿಧವಾದ ಭ್ರಮೆಯಲ್ಲವೇ... ಭ್ರಮೆಗೆ ಮಾನದಂಡವಿರುವುದಿಲ್ಲ, ಮಾನ ದಂಡವಾಗಬಹುದಷ್ಟೆ!

*ಎಚ್. ಆನಂದ್ ಕುಮಾರ್, ಚಿತ್ರದುರ್ಗ*

*ನಮಗೆ ತಿಳಿದಿಲ್ಲದ್ದು ನಿಮಗೆ ತಿಳಿಯುತ್ತಿದೆಯಲ್ಲ ಗುರೂಜಿ?*

ನಿಜ. ಮೋಡಿ ಅಕ್ಷರಗಳನ್ನೂ ಓದಿದ ನನಗೆ ನಿಮ್ಮ ಹ್ಯಾಂಡ್ ರೈಟಿಂಗ್ ತಿಳಿಯುತ್ತಿದೆ!

*ಅರಕೆರೆ ಪಿ. ಸುರೇಶ್, ಭದ್ರಾವತಿ*

*ಒಂಟಿ ಹೆಣ್ಣಿನ ಹೃದಯ ಯಾವಾಗಲೂ ಏನನ್ನು ಬಯಸುತ್ತದೆ?*

ಬೈಟೂ ಟೀ ಹಂಚಿಕೊಳ್ಳುವ ಸಂಗಾತಿಯನ್ನು!

■ ರಾಮ್